**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಗುಂಡ್ಲುಪೇಟೆ**

**ಸಿ.ಸಿ. ಸಂಖ್ಯೆ: 511/2025**

ಫಿರ್ಯಾದಿಯ ಪರ / ಪ್ರಾಸಾ – 2

ಚಾಸಾ – 4

**ಸಾಕ್ಷಿಯು ದಿಃ 04.03.2026 ರಂದು ನ್ಯಾಯಾಲಯದಲ್ಲಿ ಹಾಜರಿದ್ದು ಪ್ರಮಾಣ ವಚನ ಭೋಧಿಸಲಾಯಿತು.**

| | | |
|---|---|---|
| ಹೆಸರು | : | ಶಿವಮಲ್ಲಪ್ಪ |
| ತಂದೆಯ ಹೆಸರು | : | ನಟರಾಜು |
| ವಯಸ್ಸು | : | 34 ವರ್ಷ |
| ವೃತ್ತಿ | : | ಖಾಸಗಿ ಕೆಲಸ |
| ವಾಸಸ್ಥಳ | : | ಚೌಡಹಳ್ಳಿ |

**ಮುಖ್ಯ ವಿಚಾರಣೆ :ಮಾನ್ಯ ಎಪಿಪಿಯವರಿಂದ :–**

ಚಾಸಾ 1 ನನ್ನ ತಂದೆ. ಆರೋಪಿ ಗೊತ್ತು, ನನ್ನ ಚಿಕ್ಕಪ್ಪನ ಮಗ. ನನ್ನ ತಂದೆ ಮತ್ತು ನನ್ನ ಚಿಕ್ಕಪ್ಪ ಸುಮಾರು 25 ವರ್ಷಗಳ ಹಿಂದೆ ವಿಭಾಗ ಮಾಡಿಕೊಂಡು ಬೇರೆ ಬೇರೆ ವಾಸ ಮಾಡುತ್ತಿದ್ದೇವೆ. ಸರ್ವೇ ನಂಬರ್ 168/2 ರಲ್ಲಿ 2 ಎಕರೆ 11 ಗುಂಟೆ ಜಮೀನು ನನ್ನ ತಂದೆಯ ಹೆಸರಿನಲ್ಲಿ ಇರುತ್ತದೆ. ಆ ಪೈಕಿ 5 ಗುಂಟೆಯನ್ನು ಪಂಚಾಯತಿದಾರರ ತೀರ್ಮಾನದಂತೆ ನಮ್ಮ ಚಿಕ್ಕಪ್ಪ ಆರೋಪಿಯ ತಂದೆಗೆ ಬಿಟ್ಟುಕೊಟ್ಟಿರುತ್ತೇವೆ. ಅದು ಇನ್ನೂ ನೋಂದಣಿಯಾಗಿರುವುದಿಲ್ಲ. ಸದರಿ ಜಮೀನಿನಲ್ಲಿ ನಾವು ಬಾಳೆ ಫಸಲನ್ನು ಬೆಳೆದಿದ್ದೆವು. ದಿನಾಂಕ 05.12.2022 ರಂದು ಬೆಳಿಗ್ಗೆ 12.00 ಗಂಟೆ ಸಮಯದಲ್ಲಿ ಆರೋಪಿ ಮತ್ತು ಅವರ ತಂದೆ ಏಕಾಏಕಿ ಬಂದು ಬಾಳೆ ಗಿಡಗಳನ್ನು ಕತ್ತರಿಸಿ, ಸೋಲಾರ್ ಕಿತ್ತು ಹಾಕಿ ನಾಶ ಮಾಡಿದರು ಎಂದು ನನ್ನ ತಂದೆ ನನಗೆ ತಿಳಿಸಿರುತ್ತಾರೆ. ನಂತರ ನಾನು ಸ್ಥಳಕ್ಕೆ ಹೋಗಿರುತ್ತೇನೆ ಆಗ ಚಾಸಾ 2 ಮತ್ತು 3 ರವರು ಬಂದು ಗಲಾಟೆ ಬಿಡಿಸಿರುತ್ತಾರೆ. ಆರೋಪಿಯ ಕೃತ್ಯದಿಂದ ನಮಗೆ ಸುಮಾರು 50 ಸಾವಿರ ರೂಪಾಯಿಗಳು ನಷ್ಟವಾಗಿರುತ್ತದೆ.

**ಪಾಟೀ ಸವಾಲು :– ಆರೋಪಿಯ ಪರ ವಕೀಲರಿಂದ**

ಆರೋಪಿಗೂ ನಮ್ಮ ತಂದೆಗೂ ಮೊದಲಿನಿಂದಲೂ ಆಸ್ತಿ ವಿಚಾರವಾಗಿ ಮನಸ್ತಾಪ ಇದೆ ಎಂದರೆ ಸರಿ. ನನ್ನ ಚಿಕ್ಕಪ್ಪ ಆರೋಪಿಯ ತಂದೆ ಊರಿನ ಹಿರಿಯರ ಮುಂದೆ ತನಗೆ ಇನ್ನೂ ಆಸ್ತಿ ಬರಬೇಕೆಂದು ಕೇಳಿದ್ದರು ಎಂದರೆ ಸಾಕ್ಷಿಯು ಪಂಚಾಯಿತಿ ಮಾಡಿಸಿ 5 ಗುಂಟೆಯನ್ನು ಅವರಿಗೆ ಬಿಟ್ಟು ಕೊಟ್ಟಿದ್ದೇವೆ ಎಂದು ನುಡಿಯುತ್ತಾರೆ. ಆರೋಪಿಯು ಬಾಳೆ ಗಿಡಗಳನ್ನು ಕತ್ತರಿಸಿದ್ದಾರೆ ಎಂದು ಹೇಳಿದ ದಿನ ನಾನು ಊರಿನಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಬಾಳೆ ಗಿಡಗಳನ್ನು ಕತ್ತರಿಸುವುದನ್ನು ಮತ್ತು ಸೋಲರ್ ತಂತಿಗಳನ್ನು ನಾಶಪಡಿಸಿರುವುದನ್ನು ನಾನು ಕಣ್ಣಾರೆ ನೋಡಿರುವುದಿಲ್ಲ ಎಂದರೆ ಸರಿ, ಸಾಕ್ಷಿಯು ನನ್ನ ತಂದೆ ತಿಳಿಸಿದ್ದಾರೆ ಎಂದು ನುಡಿಯುತ್ತಾರೆ. ಆರೋಪಿಯ ತಂದೆ ಆಸ್ತಿ ಕೇಳಿದಕ್ಕೆ ಆರೋಪಿಯ ವಿರುದ್ಧ ಸುಳ್ಳು ದೂರು ನೀಡಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳುವಂತೆ ಆರೋಪಿಯು ಬಾಳೆ ಗಿಡಗಳನ್ನು ಕತ್ತರಿಸದೇ ಇದ್ದರೂ ಮತ್ತು ಸೋಲಾರ್ ತಂತಿಗಳನ್ನು ಕಿತ್ತು ಹನಿ ನೀರಾವರಿ ಪೈಪ್ ಗಳನ್ನು ಕಿತ್ತು ಹಾಕದೇ ಇದ್ದರೂ ಸಹ ಆರೋಪಿಯ ಮೇಲೆ ಇರುವ ವೈಶಮ್ಯದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

(ಶ್ರೀ. ದೀಪು ಎಂ.ಟಿ.)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಗುಂಡ್ಲುಪೇಟೆ